ಪ್ರಜಾವಾಣಿ ಶುಕ್ರವಾರ • ಜೂನ್ 24, 2016

## ₹ 10 ಕೋಟಿ ವೆಚ್ಚದಲ್ಲಿ ಕೇಂದ್ರ: ಸಚಿವ ರುದ್ರಪ್ಪ ಲಮಾಣಿ ಹೇಳಿಕೆ

# ಕೌಶಲ ಅಭಿವೃದ್ಧಿ ತರಬೇತಿ ಕೇಂದ್ರ

ಪ್ರಜಾವಾಣಿ ವಾರ್ತೆ

ಹಾವೇರಿ: 'ಮಹಿಳೆಯರು ಸ್ವಯಂ ಉದ್ಯೋಗ ಪಡೆಯಬೇಕು ಎಂಬ ಉದ್ದೇಶದಿಂದ ನಗರದಲ್ಲಿ ಸುಮಾರು ₹ 10 ಕೋಟಿ ವೆಚ್ಚದಲ್ಲಿ 'ಕೌಶಲ ಅಭಿವೃದ್ಧಿ ತರಬೇತಿ ಕೇಂದ್ರ'ವನ್ನು ನಿರ್ಮಿಸಲಾಗುವುದು' ಎಂದು ಜಿಲ್ಲಾ ಉಸ್ತುವಾರಿ ಸಚಿವ ರುದ್ರಪ್ಪ ಲಮಾಣಿ ಹೇಳಿದರು.

ನಗರದ ಕೇಂದ್ರೀಯ ಗ್ರಂಥಾಲಯದಲ್ಲಿ ಗುರುವಾರ ರಾಜ್ಯ ನಗರಾಭಿವೃದ್ಧಿ ಸಂಸ್ಥೆ ಹಾಗೂ ಪೌರಾಡಳಿತ ನಿರ್ದೇಶನಾಲಯದ ಸಹಯೋಗದಲ್ಲಿ ನಡೆದ 'ದೀನದಯಾಳ್ ಅಂತ್ಯೋದಯ ಯೋಜನೆ, ರಾಷ್ಟ್ರೀಯ ನಗರ ಜೀವನೋಪಾಯಗಳ ಅಭಿಯಾನ (ಡಿಎವೈ-ಎನ್‌ಯುಎಲ್‌ಎಂ)' ಕುರಿತ ತರಬೇತಿ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

'ನಗರದ ವೀರಶೈವ ರುದ್ರಭೂಮಿಯ ಪಕ್ಕದಲ್ಲಿ ನಗರಸಭೆಯ ಎರಡೂವರೆ ಎಕರೆ, ಮೂರು ಗುಂಟೆ ಖಾಲಿ ಜಾಗವಿದ್ದು, ಅಲ್ಲಿ ಮಹಿಳೆಯರ ಸ್ವಯಂ ಉದ್ಯೋಗ, ವೃತ್ತಿ ಹಾಗೂ ವಿವಿಧ ಕೌಶಲ ತರಬೇತಿ ನೀಡುವ ಸಂಸ್ಥೆಯನ್ನು ಸ್ಥಾಪಿಸುವ ಯೋಜನೆ ಇದೆ. ಅಲ್ಲಿ ಮಹಿಳೆಯರು ತರಬೇತಿ ಪಡೆದುಕೊಂಡು ಸಮಾಜದಲ್ಲಿ ಆರ್ಥಿಕವಾಗಿ ಅಭಿವೃದ್ಧಿ ಹೊಂದಲುಸಾಧ್ಯ' ಎಂದ ಅವರು,



ಕೇಂದ್ರೀಯ ಗ್ರಂಥಾಲಯದಲ್ಲಿ ಗುರುವಾರ ನಡೆದ 'ದೀನದಯಾಳ್ ಅಂತ್ಯೋದಯ ಯೋಜನೆ, ರಾಷ್ಟ್ರೀಯ ನಗರ ಜೀವನೋಪಾಯಗಳ ಅಭಿಯಾನ (ಡಿಎವೈ–ಎನ್‌ಯುಎಲ್‌ಎಂ)' ಕುರಿತ ತರಬೇತಿ ಕಾರ್ಯಾಗಾರವನ್ನು ಸಚಿವ ರುದ್ರಪ್ಪ ಲಮಾಣಿ ಉದ್ಘಾಟಿಸಿದರು. ನಗರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ನಿರಂಜನ ಹೇರೂರ, ನಗರಸಭೆ ಉಪಾಧ್ಯಕ್ಷ ಇರ್ಫಾನ್‌ಖಾನ್ ಪಠಾಣ್, ಜಿಲ್ಲಾ ಪಂಚಾಯ್ತಿ ಅಧ್ಯಕ್ಷ ಕೊಟ್ರೇಶಪ್ಪ ಬಸೇಗಣ್ಣಿ, ನಗರಸಭೆ ಅಧ್ಯಕ್ಷೆ ಪಾರ್ವತೆವ್ವ ಹಲಗಣ್ಣನವರ, ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಸಂಜೀವಕುಮಾರ ನೀರಲಗಿ, ಕಾರ್ಯಾಗಾರದ ಸಂಯೋಜಕ ಅಶೋಕ ಸಿ. ಇದ್ದರು

'ಜವಳಿ ಖಾತೆಯಲ್ಲಿ ಇರುವ ವಿವಿಧ ಕೌಶಲ ತರಬೇತಿಯನ್ನು ಇಲ್ಲಿನ 'ಕೌಶಲ ಅಭಿವೃದ್ಧಿ ತರಬೇತಿ ಕೇಂದ್ರ'ದಲ್ಲಿ ನೀಡುವ ಯೋಜನೆ ಇದೆ' ಎಂದರು.

'ಜವಳಿ ಇಲಾಖೆಯಿಂದ ಹಲವು ಸ್ವಯಂ ಉದ್ಯೋಗ ಸೌಲಭ್ಯಗಳಿದ್ದು, ಮಹಿಳೆಯರು ಸದುಪಯೋಗ ಪಡಿಸಿಕೊಳ್ಳಬೇಕು. ಕಸೂತಿ, ಹೊಲಿಗೆ, ನೂಲು, ಸಿದ್ಧ ಉಡುಪು, ಬಟ್ಟೆಯ ಮೇಲೆ ವಿವಿಧ ಚಿತ್ರ ಬಿಡಿಸುವುದು ಸೇರಿದಂತೆ ಹಲವಾರು ಕೌಶಲ ತರಬೇತಿಗಳಿವೆ' ಎಂದರು.

ನಗರಸಭೆ ಅಧ್ಯಕ್ಷೆ ಪಾರ್ವತೆವ್ವ ಹಲಗಣ್ಣನವರ ಮಾತನಾಡಿ, 'ಮಹಿಳೆಯ ಯಾರಿಗಿಂತಲೂ ಕಡಿಮೆ ಇಲ್ಲ ಎಂದು ತೋರಿಸಬೇಕಾದರೆ, ಸರ್ಕಾರಿ ಉದ್ಯೋಗಕ್ಕೆ ದುಂಬಾಲು ಬೀಳದೇ, ಸ್ವಯಂ ಉದ್ಯೋಗಕ್ಕೆ ಒತ್ತು ನೀಡಬೇಕು. ಆರ್ಥಿಕ ಸ್ವಾವಲಂಬಿ ಆಗಬೇಕು' ಎಂದರು.

'ಪ್ರತಿಯೊಬ್ಬ ಮಹಿಳೆಯಲ್ಲಿ ತನ್ನದೇ ಕೌಶಲಗಳು ಇರುತ್ತವೆ. ಆದರೆ, ಅವುಗಳನ್ನು ವ್ಯಕ್ತಪಡಿಸಲು ಸೂಕ್ತ ವೇದಿಕೆ ಸಿಕ್ಕಿರುವುದಿಲ್ಲ. ಈ ನಿಟ್ಟಿನಲ್ಲಿ ಮಹಿಳೆಯರು ತರಬೇತಿ ಶಿಬಿರದ ಮೂಲಕ ತಮ್ಮ ಕೌಶಲಗಳನ್ನು ಸಮಾಜಕ್ಕೆ ತೋರಿಸಬೇಕು' ಎಂದರು.

ಜಿಲ್ಲಾ ಪಂಚಾಯ್ತಿ ಅಧ್ಯಕ್ಷ ಕೊಟ್ರೇಶಪ್ಪ ಬಸೇಗಣ್ಣಿ, ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಸಂಜೀವಕುಮಾರ ನೀರಲಗಿ, ನಗರಸಭೆ ಉಪಾಧ್ಯಕ್ಷ ಇರ್ಫಾನ್‌ಖಾನ್ ಪಠಾಣ್, ನಗರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ನಿರಂಜನ ಹೇರೂರ, ಕಾರ್ಯಾಗಾರದ ಸಂಯೋಜಕ ಅಶೋಕ ಸಿ., ಸಮುದಾಯ ಅಭಿವೃದ್ಧಿ ತಜ್ಞ ಡಾ. ಡಿ. ನಟರಾಜ್ ಗೌಡ, ನಗರ ಯೋಜನಾಧಿಕಾರಿ ವಾಸಣ್ಣ ಆರ್ ಮತ್ತಿತರರು ಇದ್ದರು.

**ಸರ್ಕಾರ ನೇರವಾಗಿ ಎಲ್ಲರಿಗೂ ಉದ್ಯೋಗ ನೀಡುವುದು ಕಷ್ಟ. ಅದಕ್ಕಾಗಿ ವಿವಿಧ ಕೌಶಲಗಳ ಕುರಿತು ತರಬೇತಿ ನೀಡಿ, ಸ್ವಯಂ ಉದ್ಯೋಗಕ್ಕೆ ದಾರಿ ಮಾಡಿಕೊಡಲಾಗುವುದು**

**ರುದ್ರಪ್ಪ ಲಮಾಣಿ**

ಜಿಲ್ಲಾ ಉಸ್ತುವಾರಿ ಸಚಿವ

# ಹಾವೇರಿಯಲ್ಲಿ 10 ಕೋ. ರೂ ವೆಚ್ಚದ ಕೌಶಲ್ಯ ಭವನ



ಜವಳಿ ಮತ್ತು ಮುಜರಾಯಿ ಖಾತೆ ಸಚಿವ ರುದ್ರಪ್ಪ ಲಮಾಣಿ ಕಾರ್ಯಕ್ರಮ ಉದ್ಘಾಟನೆ.

ಹಾವೇರಿ: ಜಿಲ್ಲಾಕೇಂದ್ರ ಸ್ಥಳವಾದ ಹಾವೇರಿ ನಗದಲ್ಲಿ 10 ಕೋಟಿ ರೂ. ವೆಚ್ಚದಲ್ಲಿ ಕೌಶಲ್ಯ ಭವನ ನಿರ್ಮಾಣಕ್ಕೆ ಸದ್ಯದಲ್ಲೇ ಚಾಲನೆ ನೀಡಲಾಗುವುದು ಎಂದು ಜವಳಿ, ಮುಜರಾಯಿ ಖಾತೆ ಹಾಗೂ ಜಿಲ್ಲಾಉಸ್ತುವಾರಿ ಸಚಿವ ರುದ್ರಪ್ಪ ಲಮಾಣಿ ಹೇಳಿದರು.

ಗುರುವಾರ ಇಲ್ಲಿನ ನಗರದ ಕೇಂದ್ರ ಗ್ರಂಥಾಯಲದ ಸಭಾಂಗಣದಲ್ಲಿ ಪೌರಾಡಳಿತ ನಿರ್ದೇಶನಾಲಯ ಪ್ರಾಯೋಜಕತ್ವದ, ಮೈಸೂರಿನ ರಾಜ್ಯ ನಗರಾಭಿವೃದ್ಧಿ ಸಂಸ್ಥೆ, ನಗರಸಭೆ ಹಾವೇರಿ ಸಹಯೋಗದಲ್ಲಿ ನಗರಸಭಾ ಸದಸ್ಯರಿಗೆ ದೀನದಯಾಳ್ ಅಂತ್ಯೋದಯ ಯೋಜನೆ- ರಾಷ್ಟ್ರೀಯ ನಗರ ಜೀವನೋಪಾಯಗಳ ಅಭಿಯಾನ ಯೊಜನೆಯ ಕುರಿತು ಒಂದು ದಿನದ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದರು.

ನಗರದ ಹೆಗ್ಗೇರಿಕೆರೆ ರಸ್ತೆಯಲ್ಲಿನ ವೀರಶೈವ ರುದ್ರಭೂಮಿಯ ಪಕ್ಕದಲ್ಲಿರುವ 2.33 ಎಕರೆ ಪ್ರದೇಶದಲ್ಲಿ ಕೌಶಲ್ಯ ಭವನ ನಿರ್ಮಾಣವನ್ನು ಮಾಡಲಾಗುವುದು, ಇಲ್ಲಿ ಕಸೂತಿ ಕಲೆಯ ಐಟಿಐ ಶಿಕ್ಷಣವನ್ನು ನೀಡಲಾಗುವುದು. ಕೌಶಲ್ಯ ಭವನ ನಿರ್ಮಾಣಕ್ಕೆ ಇನ್ನು ಕೆಲವೆ ದಿನದಲ್ಲಿ ಚಾಲನೆ ನೀಡಲಾಗುವುದು. ಇದಕ್ಕಾಗಿ 10 ಕೋಟಿ ರೂ ಬಿಡುಗಡೆಯಾಗಿದೆ. ಇಲ್ಲಿ ಐಟಿಐ ಸರಕಾರಿ ಕಾಲೇಜು ನಿರ್ಮಾಣಕ್ಕಾಗಿ 2 ಕೋಟಿ ರೂಗಳನ್ನು ಬಿಡುಗಡೆಯಾಗಿದೆ ಎಂದು ಅವರು ಹೇಳಿದರು.

ಮಹಿಳೆಯರು,ಯುವತಿಯರು ಕಸೂತಿ ಕಲೆಯ ತರಬೇತಿಯನ್ನು ಪಡೆದುಕೊಂಡರೆ ಸ್ವ ಉದ್ಯೋಗ ಸೇರಿದಂತೆ ಜವಳಿ ಕ್ಷೇತ್ರದಲ್ಲಿ ಅನೇಕ ಉದ್ಯೋಗವಕಾಶಗಳು ದೊರೆಯುತ್ತವೆ. ▸▸2

# ಕೌಶಲ್ಯ ಭವನ

ಇಂದು ರಾಜ್ಯ ಸೇರಿದಂತೆ ಭಾರತದಲ್ಲಿ ಗಾರ್ಮೆಂಟ ಉದ್ಯಮ
ದೊಡ್ಡ ಪ್ರಮಾಣದಲ್ಲಿದೆ. ಈ ಕ್ಷೇತ್ರ ಬೆಳೆಯುತ್ತಲೇ ಇರುವಂತ
ಉದ್ಯಮವಾಗಿದೆ. ಇಂದು ವಿಶ್ವ ಮಟ್ಟದಲ್ಲಿ ಕಸೂತಿ ಕ್ಷೇತ್ರದಲ್ಲಿ ತರಬೇತಿ
[illegible] ಬಹಳ ಬೇಡಿಕೆ ಇದೆ. [illegible]
ಮತ್ತು ಮಹಿಳೆಯರು ಇದರ ಪ್ರಯೋಜನವನ್ನು ಪಡೆದುಕೊಳ್ಳಲು
ಸಹಾಯವಾಗುತ್ತದೆ ಎಂದು ಅವರು ಹೇಳಿದರು.

ವಿದೇಶಗಳಲ್ಲಿ ವೈವಿಧ್ಯಮಯ ಕಸೂತಿಕಲೆಯ ಸಿದ್ಧ ಉಡುಪುಗಳಿಗೆ
ಬಹಳ ಬೇಡಿಕೆ ಇದೆ. ಜಗತ್ತಿನ ಪ್ರತಿ ಒಬ್ಬ ಮನಿಷ್ಯನೂ ಉಡುಗೆ
ತೊಡಿಗೆಗಳಲ್ಲಿ ಪ್ರತಿ ನಿತ್ಯವೂ ಹೊಸತನವನ್ನು ಬಯಸುವವರಾಗಿದ್ದಾರೆ
ಹೀಗಾಗಿ ಜವಳಿ ಉದ್ಯಮಕ್ಕೆ ಬಹಳ ಬೇಡಿಕೆ ಮತ್ತು ಅವಕಾಶಗಳಿವೆ.
ಇಂತಹ ಅವಕಾಶಗಳನ್ನು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳುವ ಮತ್ತು
ಬೆಳೆಸುವ ನಿಟ್ಟಿನಲ್ಲಿ ನಾವೆಲ್ಲ ಸಾಗಬೇಕಾಗಿದೆ ಎಂದರು.

ಈ ಮೊದಲು ಸ್ಥಿತಿವಂತರು ಮಾತ್ರ ಕಸೂತಿ ಕಲೆಯ ತರಬೇತಿಯನ್ನು
ಪಡೆದುಕೊಳ್ಳಲು ಸಾಧ್ಯವಾಗುತ್ತಿತ್ತು. ಆದರೆ ಇಂದು ಸರಕಾರವೇ ಬಡವರ
ಮನೆ ಬಾಗಿಲಿಗೆ ಹೋಗಿ ಇಂತಹ ತರಬೇತಿಗಳನ್ನು ನೀಡುತ್ತಿದೆ. ಇದರ
ಸದುಪಯೋಗವನ್ನು ಎಲ್ಲರೂ ಪಡೆದುಕೊಳ್ಳಬೇಕೆಂದು ಯುವ ಜನತೆಗೆ
ಅವರು ಕರೆ ನೀಡಿದರು.

ನಗರಸಭೆ ಅಧ್ಯಕ್ಷೆ ಪಾರ್ವತಮ್ಮ ಹಲಗಣ್ಣವರ ಮಾತನಾಡಿದರು.
ಕಾರ್ಯಗಾರದ ಸಂಯೋಜಕ ಅಶೋಕ ಚಲವಾದಿ ಮಾತನಾಡಿ. ಕೇಂದ್ರ
ಸರಕಾರ ಸಮಾಜದಲ್ಲಿನ ಬಡತನವನ್ನು ನಿವಾರಣೆ ಮಾಡುವ
ಉದ್ದೇಶದಿಂದ ದೀನದಯಾಳ್ ಅಂತ್ಯೋದಯ ಯೋಜನೆ- ರಾಷ್ಟ್ರೀಯ
ನಗರ ಜೀವನೋಪಾಯಗಳ ಅಭಿಯಾನ ಯೋಜನೆಯನ್ನು ಜಾರಿಗೆ
ತಂದಿದೆ. ನಗರ ಪ್ರದೇಶ ಸೇರಿದಂತೆ ಗ್ರಾಮೀಣ ಭಾಗದಲ್ಲಿನ
ನಿರುದ್ಯೋಗಿಗಳು ಸ್ವ-ಉದ್ಯೋಗ ಮತ್ತು ಗುಂಪುಗಳಲ್ಲಿನಸದಸ್ಯರು ಸೇರಿ
ಉದ್ಯೋಗವನ್ನು ಪ್ರಾರಂಭಿಸುವವರಿಗೆ ಬ್ಯಾಂಕಗಳಿಂದ ಸಾಲವನ್ನು
ಕೊಡಿಸಬಹುದಾಗಿದೆ. ನಗರ ಪ್ರದೇಶದಲ್ಲಿ ಫಲಾನುಭವಿಗಳ ಆಯ್ಕೆಯನ್ನು
ನಗರಸಭೆಯ ಮೂಲಕ ಮಾಡಲಾಗುವುದು . ಆಯ್ಕೆ ಆಯ್ಕೆ ಆಯಾದ
ಫಲಾನುಭವಿಗಳಿಗೆ ಬ್ಯಾಂಕಗಳು ಸಾಲವನ್ನು ನೀಡುತ್ತವೆ. ಸಾಲ ನೀಡುವ
ಸಂದರ್ಭದಲ್ಲಿ ಯಾವುದೇ ಜಾಮೀನನ್ನು ನೀಡುವ ಅವಶ್ಯಕತೆ ಇಲ್ಲ.
ಮತ್ತು ಪಡೆದ ಸಾಲವನ್ನು ಯಾವುದೇ ಕಾರಣಕ್ಕೂ ಮನ್ನಾ
ಮಾಡಲಾಗುವುದಿಲ್ಲ. ಪಡೆದ ಸಾಲಕ್ಕೆ ಶೇ.7 ಸಬ್ಸಿಯನ್ನು ಕೇಂದ್ರ ಸರಕಾರ
ನೀಡುತ್ತದೆ. ಇದನ್ನು ನೇರವಾಗಿ ಫಲಾನುಭವಿಗೆ ನೀಡದೆ ಸಾಲ
ಮರುಪಾವತಿ ಕಂತಿನಲ್ಲಿ ಸೇರಿಸಿ ಪಾವತಿಸಲಾಗುವುದು ಎಂದು ತಿಳಿಸಿದರು.

ವೇದಿಕೆಯಲ್ಲಿ. ಜಿ.ಪಂ ಅಧ್ಯಕ್ಷ ಕೊಟ್ರೇಶಪ್ಪ ಬಸೇಗಣ್ಣಿ, ನಗರಾಭಿವೃದ್ಧಿ
ಪ್ರಾಧಿಕಾರದ ಅಧ್ಯಕ್ಷ ಸಂಜೀವಕುಮಾರ ನೀರಲಗಿ, ನಗರಸಭೆ ಉಪಾಧ್ಯಕ್ಷ
ಇರ್ಫಾನಖಾನ ಪಠಾಣ, ನಗರಸಭೆ ಸ್ಥಾಯಿ ಸಮೀತಿ ಅಧ್ಯಕ್ಷ ನಿರಂಜನ
ಹೆರೂರ ಹಾಗೂ ರಾಜ್ಯ ನಗರಾಭಿವೃದ್ಧಿ ಸಂಸ್ಥೆಯ ವಾಸಣ್ಣ
ಉಪಸ್ಥಿತರಿದ್ದರು.